ಒಬ್ಬ ಮೂರ್ಖ ಇನ್ನೊಬ್ಬ ಮೂರ್ಖನಿಗೆ ಒಂದು ವೇಳೆ
ನೀನು ನನ್ನ ಚೀಲದಲ್ಲಿ ಏನಿದೆ ?
ಎಂದು ಹೇಳಿದರೆ ಎಲ್ಲ ಮೊಟ್ಟೆಗಳನ್ನು ನಿನಗೆ ಕೊಡುವೆ
ಹಾಗೂ ಅವು ಎಷ್ಟಿವೆ ? ಎಂದು ಹೇಳಿದರೆ ಎಂಟಕ್ಕೆ
ಎಂಟೂ ಮೊಟ್ಟೆಗಳನ್ನು
ನಿನಗೇನೆ ಹಾಗೂ ಆ ಮೊಟ್ಟೆಗಳು ಯಾವ
ಪ್ರಾಣಿಯದೆಂದು ಹೇಳಿದರೆ,
ಆ ಕೋಳಿಯೂ ನಿನಗೇನೆ ಎಂದು ಹೇಳಿದ.
ಆ ಇನ್ನೊಬ್ಬ ಮೂರ್ಖ-ಅರೇ ಗೆಳೆಯಾ ! ಏನಾದರೂ
ಸಂಕೇತ ಕೊಡು, ಬಹಳ ಜಟಿಲ ಪ್ರಶ್ನೆ ಇದೆ-ಎಂದ.
ನಮ್ಮ ಜೀವನದ ಪ್ರತಿಯೊಂದು ಪ್ರಶ್ನೆಯ ಉತ್ತರವೂ
ನಮ್ಮ ಜೀವನದಲ್ಲಿಯೇ ಅಡಗಿದೆ.
ಆದರೂ ನಾವು ಅದನ್ನು ಎಲ್ಲಿ ತಿಳಿಯುತ್ತೇವೆ ?

ಕೊಠಡಿಯ ಮೇಲ್ಛಾವಣಿಗೆ ಒಂದು ಬಾವಲಿ
ತಲೆಕೆಳಗಾಗಿ ನೇತಾಡುವುದನ್ನು ನಾನು ನೋಡಿದೆ. "ಏನು
ವಿಷಯ ಮೇಲ್ಛಾವಣಿಯಿಂದ ತಲೆ ಕೆಳಗಾಗಿ ಯಾಕೆ
ನೇತಾಡುತ್ತಿದ್ದೀಯ ಕೆಳಗೆ ಯಾಕೆ ಬರುವುದಿಲ್ಲ"
ಎಂದು ಕೇಳಿದೆ. "ಮುನಿಶ್ರೀ ! ನಾನು ಈ
ಮೇಲ್ಛಾವಣಿಯನ್ನು ಎತ್ತಿ ಹಿಡಿದಿದ್ದೇನೆ, ನಾನು ಇಲ್ಲಿಂದ
ಸರಿದರೆ ಈ ಮೇಲ್ಛಾವಣಿ ಕೆಳಗೆ ಬೀಳುತ್ತದೆ" ಎಂದಿತು,
ಆ ಬಾವಲಿ. ಆ ಬಾವಲಿ ಬೇರೆ ಯಾರೂ ಅಲ್ಲ 'ನೀವೇ'
ಆಗಿದ್ದೀರಾ. ನೀವೂ ಸಹ "ಈ ಮನೆ-ಗೃಹಸ್ಥ
ಜೀವನವನ್ನು ನಾನೇ ನಡೆಸುತ್ತಿದ್ದೇನೆ, ನಾನು ಇರದಿದ್ದರೆ
ಎಲ್ಲವೂ ಗಡಿಬಿಡಿಯಾಗಿ ಬಿಡುತ್ತದೆ, ಎಂಬ ಭ್ರಮೆಯಲ್ಲಿ
ಜೀವಿಸುತ್ತಿದ್ದೀರಿ. ನೆನಪಿನಲ್ಲಿಡಿ : ಯಾರು ಹೊರಟು
ಹೋದರೂ ಯಾರ ಸಂಸಾರವೂ ನಿಲ್ಲಲಾರದು.

ಜಗತ್ತಿನಲ್ಲಿ ಮೂರು ಸಂಗತಿಗಳಿವೆ - ಇವು ಸಾವಿನ ನಂತರವೂ ಬೆಂಬಿಡುವುದಿಲ್ಲ. ಒಂದು - ಪುಣ್ಯ - ಪುಣ್ಯವು ಸಾವಿನ ನಂತರ ವ್ಯಕ್ತಿಯನ್ನು ಸ್ವರ್ಗಕ್ಕೆ ಒಯ್ಯುತ್ತದೆ. ಎರಡು- ಪಾಪ - ಪಾಪವು ಸಾವಿನ ನಂತರ ವ್ಯಕ್ತಿಯನ್ನು ನರಕಕ್ಕೆ ಒಯ್ಯುತ್ತದೆ. ಮೂರು- ಗುರುಮಂತ್ರ - ಸಮರ್ಥ ಗುರುವಿನ ಮೂಲಕ ಪಡೆದ ಗುರು-ಮಂತ್ರವನ್ನು ಒಂದು ಪೇಳೆ ಶ್ರದ್ಧಾ - ಭಕ್ತಿಯಿಂದ ಜಪಿಸಿದರೆ ಅದು (ವ್ಯಕ್ತಿಯನ್ನು) ಈಶ್ವರನ ಬಳಿಗೆ ಒಯ್ಯುತ್ತದೆ.

ಮನಸ್ಸಿಗೆ ಸ್ಥಾಯೀ ಪ್ರಸನ್ನತೆಯನ್ನು ನೀಡುವ ಕಾರ್ಯವು "ಪುಣ್ಯ". ಮನಸ್ಸಿಗೆ ಸ್ಥಾಯೀ ಪಶ್ಚಾತ್ತಾಪವನ್ನು ನೀಡುವ ಕಾರ್ಯವು "ಪಾಪ " ಹಾಗೂ ಮಹಾಪುರುಷರ ಯಾವ ಶಬ್ದ ಅಥವಾ ವಾಕ್ಯದಿಂದ ನಿಮ್ಮ ಜೀವನದ ದಿಕ್ಕು ಬದಲಾಯಿತೋ ಆ ಶಬ್ದ ಹಾಗೂ ವಾಕ್ಯವೇ "ಗುರುಮಂತ್ರ"

ಕೋಪ ಮಾಡಿಕೊಳ್ಳಬೇಕೆ ? ಯಾರ ಮೇಲಾದರೂ ಸೇಡು ತೀರಿಸಿಕೊಳ್ಳಬೇಕೆ ? ಹಾಗಾದರೆ ಇದರಲ್ಲಿ ಅವಸರ ಬೇಡ. ಅದರ ಬದಲಾಗಿ ಯಾವುದಾದರೂ ಜ್ಯೋತಿಷಿಯ ಬಳಿಗೆ ಹೋಗಿ ನಾನು ಕೋಪ ಮಾಡಿಕೊಳ್ಳಬೇಕಾಗಿದೆ ಎಂದು ಹೇಳಿ. ಒಬ್ಬ ವ್ಯಕ್ತಿ ಇದ್ದಾನೆ - ಆತನ ಮೇಲೆ ಸೇಡು ತೀರಿಸಿಕೊಳ್ಳ ಬೇಕಾಗಿದೆ ಇದಕ್ಕಾಗಿ ನೀವು ಒಳ್ಳೆಯ ಮಹೂರ್ತವನ್ನು ತೆಗೆದುಕೊಡಿ. ನೀವು ಎಲ್ಲ ಶುಭ ಕಾರ್ಯಗಳಿಗೆ ಮಹೂರ್ತ ನೋಡುವಿರಾದರೆ ಅಶುಭ ಕಾರ್ಯವನ್ನು ಮುಹೂರ್ತ ನೋಡದೆ ಯಾಕೆ ಮಾಡುತ್ತೀರಾ ?

ಕೋಪ ಮಾಡಿಕೊಳ್ಳಲು ಪುಷ್ಯ ನಕ್ಷತ್ರದಲ್ಲಿ ಅಮೃತ ಯೋಗದ ಮುಹೂರ್ತ ಎಲ್ಲಕ್ಕಿಂತ ಚೆನ್ನಾಗಿದೆ. ಆದರೆ ಇದು ವರ್ಷದಲ್ಲಿ ಕೇವಲ ಎರಡು ಸಾರಿ ಮಾತ್ರ ಬರುತ್ತದೆ. ಈಗ ನಿಮ್ಮ ಅನಿಸಿಕೆಯೇನು ?

ನೀವು ಚಿಕ್ಕವರಿದ್ದಾಗ ಹಾಗೂ ಸ್ವಯಂ ಗಳಿಸದಿದ್ದಾಗ ನಿಮ್ಮ ತಂದೆ ನಿಮಗೆ ಖರ್ಚಿಗಾಗಿ "ಪಾಕೆಟ್ ಮನಿ" ಕೊಡುತ್ತಿದ್ದರು. ಈಗ ನೀವು ದೊಡ್ಡವರಾಗಿದ್ದೀರಿ, ಸ್ವಯಂ ಗಳಿಸುತ್ತಿದ್ದೀರಿ ಹಾಗೂ ನಿಮ್ಮ ತಂದೆ ವೃದ್ಧರಾಗಿದ್ದಾರೆ, ಈಗ ನೀವು ನಿಮ್ಮ ತಂದೆಗೆ "ಪಾಕೆಟ್ ಮನಿ" ಕೊಡಬೇಕಲ್ಲ.

ನೀವು ಏನನ್ನಾದರೂ ಗಳಿಸಿ, ಅದರಲ್ಲಿ ಒಂದು ಭಾಗವನ್ನು ನಿಮ್ಮ ತಂದೆಯ ಕೈಯಲ್ಲಿ ಇಟ್ಟುಬಿಡಿ,

ಹಾಗೂ

"ಪೂಜ್ಯ ತಂದೆಯವರೇ, ಎಲ್ಲವೂ ನಿಮ್ಮದೇ ಆದರೆ ಈ ಭಾವನಾ ಪುಷ್ಪವನ್ನು ಸ್ವೀಕಾರ ಮಾಡಿ ನಮಗೆ ಆಶೀರ್ವಾದ ಮಾಡಿ" ಎಂದು ಹೇಳಿ.

ಒಂದು ವೇಳೆ ನಿಮ್ಮ ಮಗ ತನ್ನ ಡ್ರಾಯಿಂಗ್ ರೂಮ್‌ನಲ್ಲಿ ನಿಮ್ಮದೊಂದು ಸುಂದರವಾದ ಚಿತ್ರಪಟವನ್ನು ನೇತುಹಾಕಿದರೆ ಇದರಿಂದ ಹರ್ಷಿತರಾಗಿಬಿಡಬೇಡಿರಿ. ಅದಕ್ಕೆ ಬದಲಾಗಿ "ಚಿತ್ರಪಟವನ್ನಂತೂ ಗೋಡೆಗೆ ನೇತು ಹಾಕಿಯಾಗಿದೆ ಈಗ ಆ ಚಿತ್ರಪಟದ ಮೇಲೆ ಹೂವಿನ ಮಾಲೆ ಯಾವಾಗ ಏರಬಹುದು" ಎಂದು ಯೋಚಿಸಿ. ಚಿತ್ರಪಟದ ಮೇಲೆ ಹೂವಿನ ಮಾಲೆ ಏರುವ ಮೊದಲೇ ಪ್ರಭುವಿಗೆ ಶರಣಾಗಿ, ಪ್ರಭುವಿನ ನಾಮಸ್ಮರಣೆ ಮಾಡ ತೊಡಗಿ-ಜಪಮಾಲೆಯನ್ನು ಎಣಿಸುತ್ತಾ ಕುಳಿತುಕೊಳ್ಳಿ. ಜಪಮಾಲೆಯೇ ಮಾಲೆಯಾಗಿದೆ, ಬೇರೆ ಎಲ್ಲ ಮಾಲೆಗಳು ಕೆಲಸಕ್ಕೆ ಬಾರವು, ಪ್ರಭು ಒಳ್ಳೆಯವ ನೆನಿಸಲಿ ಹಾಗೂ ಸತ್ಯವೆನಿಸಲಿ, ಇಷ್ಟೇ ಸಾಲದು, ಪ್ರಭುವನ್ನು ತನ್ನೆಡೆಗೆ ಕರೆದುಕೊಳ್ಳುವುದು ಅವಶ್ಯಕವಾಗಿದೆ.

ಬೈಗುಳಗಳಲ್ಲಿಯೂ 'ಗೀತೆ' ಇದೆ, ಆದರೆ ಅದನ್ನು ಹುಡುಕುವ ಕಲೆ ತಿಳಿದಿರಬೇಕು. ಒಂದು ವೇಳೆ ಆ ಕಲೆ ನಿಮಗೆ ತಿಳಿದಿದ್ದರೆ ಯಾವುದೇ ಬೈಗುಳ ನಿಮ್ಮನ್ನು ಕುಪಿತನನ್ನಾಗಿ ಮಾಡಲಾರದು. ಒಳ್ಳೆಯ ಉದಾಹರಣೆ ಎಂದರೆ-ಪತಿ-ಪತ್ನಿಯರಲ್ಲಿ ಜಗಳವಾಯಿತು. ಪತ್ನಿಯು ಕೋಪದಲ್ಲಿ ಪತಿಯನ್ನು 'ಜಾನವಾರ' ಎಂದು ಹೇಳಿಬಿಟ್ಟಳು. ನಂತರ ಪತ್ನಿ ''ನಾನು ನಿಮಗೆ 'ಜಾನವಾರ್' ಎಂದು ಕರೆದೆ ನಿಮಗೆ ಕೆಡುಕೆನಿಸಲಿಲ್ಲವೇ ?'' ಎಂದು ಕೇಳಿದಳು. ಇಲ್ಲವೆಂದ ಪತಿ. ಯಾಕೆ ? ಎಂದು ಕೇಳಿದಳು ಪತ್ನಿ, ನೀನು ನನ್ನ 'ಜಾನ್' ಅಲ್ಲವೇ ? ಎಂದ ಪತಿ. ಹೌದು, ಎಂದಳು ಪತ್ನಿ. ಹಾಗೂ ನಾನು ನಿನ್ನ 'ವರ' ಅಲ್ಲವೆ ? ಹೌದು ಎಂದಳು ಪತ್ನಿ, ಹಾಗಿದ್ದ ಮೇಲೆ ನಾನು ಮತ್ತು ನೀನು 'ಜಾನವರ' (ಪ್ರಾಣಿ) ಆದೆವು ಅಲ್ಲವೇ ? ಇದೇ ಬೈಗುಳಗಳಲ್ಲಿಯೂ ಗೀತೆಯನ್ನು ಹುಡುಕುವ ಕಲೆಯಾಗಿದೆ.

ಸಮಾಜ ತಪ್ಪು ದಾರಿಯಲ್ಲಿ ಸಾಗುತ್ತಲಿದೆ. ಇದಕ್ಕೆ ಇರುವ ಒಂದು ದೊಡ್ಡ ಕಾರಣ ಮಾಧ್ಯಮಗಳು. ಇಂದು ಮಾಧ್ಯಮಗಳು ಮನೋರಂಜನೆಯ ಹೆಸರಿನಲ್ಲಿ ಹಿಂಸೆ ಮತ್ತು ಅಶ್ಲೀಲತೆಗಳನ್ನು ಹರಡುತ್ತಲಿವೆ. ಮಾಧ್ಯಮಗಳು 'ವಾಸ್ತವಿಕ' ಸಮಾಚಾರದ ಸುಳಿಯಲ್ಲಿ 'ಒಳ್ಳೆಯ' ಸಮಾಚಾರವನ್ನು ಮರೆತು ಬಿಟ್ಟಿವೆ. ಪ್ರತಿಯೊಂದು ವಾಸ್ತವಿಕ ಸಮಾಚಾರ ಒಳ್ಳೆಯದಾಗಿಯೇ ಇರಬೇಕಾದುದು ಅಶ್ಯವಿಲ್ಲ. ಯಾವ ಸಮಾಚಾರಗಳಿಂದ ಸಮಾಜದ ಆರೋಗ್ಯ ಕೆಡುತ್ತದೆಯೋ ಅವುಗಳನ್ನು ಪ್ರಕಟಿಸದೆ-ತೋರಿಸದೇ ಇರುವುದೇ ಒಳ್ಳೆಯದು. ಸಮಾಜದ ಸುಧಾರಣೆಯಲ್ಲಿ ಮಾಧ್ಯಮಗಳ ಅಹಂ ಭೂಮಿಕೆ ಇರುವ ಸಾಧ್ಯತೆ ಇದೆ. ಆದರೆ ದೌರ್ಭಾಗ್ಯದಿಂದ ಪ್ರಜಾಪ್ರಭುತ್ವದ ಈ ನಾಲ್ಕನೇ ಸ್ತಂಭವೂ ಸಹ ಇಂದು ವೃತ್ತಿಪರತೆಗೆ ಬಲಿಯಾಗ ತೊಡಗಿದೆ.

ಒಂದು ವೇಳೆ ನೀವು ಪತ್ನಿಯಾಗಿದ್ದರೆ ನೀವು ನಿಮ್ಮ ಪತಿಯ ಆದಾಯಕ್ಕಿಂತ ಹೆಚ್ಚು ವೆಚ್ಚಮಾಡಬೇಡಿ. ಕಾರಣವೆಂದರೆ. ಆದಾಯ ಮತ್ತು ವೆಚ್ಚದಲ್ಲಿ ಸಮತೋಲನವಿದ್ದಾಗಲೇ ದಾಂಪತ್ಯ ಜೀವನದಲ್ಲಿ ಸಮತೋಲನವಿರುತ್ತದೆ. ಪತಿಯ ಮೇಲೆ ಅನಾವಶ್ಯಕ ಭಾರ ಮತ್ತು ಚಿಂತೆಗೆ ಕಾರಣವಿರದಂತೆ ನೋಡಿಕೊಳ್ಳುವುದು ಪತ್ನಿಯ ಜವಾಬ್ದಾರಿಯಾಗಿದೆ. ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು. ಆದರೆ ಇಂದಿನ ಪತ್ನಿಯರೂ ಸಹ ಆಶ್ಚರ್ಯಕರ ಆಗಿದ್ದಾರೆ, ಅವರು ಪತಿಯ ಆದಾಯವನ್ನು ನೋಡದೆ ಹೊಸ-ಹೊಸ ಬೇಡಿಕೆಗಳನ್ನು ಮುಂದಿಡುತ್ತಲಿದ್ದಾರೆ. ಪತಿಯ ನಿಧನಾನಂತರವೇ ಪತ್ನಿಯು ಬುದ್ದಿವಂತಿಕೆ ಉಳ್ಳವರಾಗುವುದು ನಿಜ ಸಂಗತಿಯಾಗಿದೆ. ಕಾರಣವೆಂದರೆ ಆಗ ಅವಳಿಗೆ ಗಳಿಸುವುದುರ ಮಹತ್ವ ಅರಿವಾಗುತ್ತದೆ.

ಇಂದು ಜನರು ವೈಷ್ಣವದೇವಿ ಅಥವಾ ಸಮ್ಮೇದಶಿಖರಜಿ ಮುಂತಾದ ತೀರ್ಥಗಳ ಯಾತ್ರೆ ಮಾಡುವುದರ ಬದಲಾಗಿ 'ಅಲ್-ಕಬೀರ 'ಗಳಂತಹ ಕಸಾಯಿಖಾನೆಗಳ ದರ್ಶನಾರ್ಥಿಗಳಾಗಿ ಹೋಗಬೇಕು ಎನ್ನುವುದು ನನ್ನ ಅನಿಸಿಕೆ. ಶ್ರೇಷ್ಠಕ್ಕಿಂತ ಶ್ರೇಷ್ಠವಾದ ತೀರ್ಥಯಾತ್ರೆಗಳಿಂದ ಇಲ್ಲಿಯವರೆಗೆ ಯಾವ ಚಮತ್ಕಾರ ಆಗಿಲ್ಲವೋ, ಆ ಚಮತ್ಕಾರ ಈ ಕಸಾಯಿಖಾನೆಗಳು ತೋರಿಸುತ್ತವೆ. ಎಂಬುವ ವಿಶ್ವಾಸ ನನಗಿದೆ. ಅಲ್ಲಿ ಪ್ರಾಣಿಗಳಿಗೆ ನೀಡುವ ಕ್ರೂರ-ದೃಶ್ಯಗಳನ್ನು ನೋಡಿದ ನಂತರ ಬಹುಶಃ ಯಾರೂ ಮಾಂಸಹಾರಿಗಳಾಗಲಾರರು. ಅಲ್ಲಿ ಎಮ್ಮೆಗಳನ್ನು ಕತ್ತರಿಸುವ ಮತ್ತು ಅವುಗಳ ಚರ್ಮವನ್ನು ಸುಲಿಯುವುದನ್ನು ನೋಡಿದರೆ ಅಂತರಾತ್ಮನು ನಡುಗಿ ಹೋಗುತ್ತಾನೆ.

ಬೆಕ್ಕು ಮತ್ತು ಶೇಖ್ ಮಹಮ್ಮದ್ ಹಾಗೆ ಈಗ ದಿಲ್ಲಿಯ
ಮೇಲೂ ಭರವಸೆ ಇಡುವ ಹಾಗಿಲ್ಲ.
ಹಾಜ್ ಯಾತ್ರೆ ಮಾಡಿ ಹಿಂದಿರುಗಿರುವ ಬೆಕ್ಕಿನ ಮೇಲೆ-
ಇಲಿ, ಅದು ಸುಧಾರಿಸಿದೆ ಇಲಿಯನ್ನು ತಿನ್ನುವುದನ್ನು
ಬಿಟ್ಟಿದೆ ಎಂದು ಭಾವಿಸಿದರೆ ಅದು
ಅದರ ಬಹಳ ದೊಡ್ಡ ಪ್ರಮಾದವಾದೀತು.
ಕೇವಲ ಕನಸುಗಳಲ್ಲಿಯೇ ಬದುಕುವುದನ್ನು ತಿಳಿದಿರುವ
ಶೇಖ್ ಮಹಮ್ಮದ್ ಮೇಲೆ ಭರವಸೆ ಇಡುವುದು ಹೇಗೆ ?
ಈಗ ದಿಲ್ಲಿ ? ಎಲ್ಲಿ ಕೇವಲ ಮಾತುಗಳ ಬಾದಷಹಾಗಳ
ಸಭೆಯಾಗಿ ಆಚರಣೆಯ ಆಚಾರ್ಯರು ದೂರ-ದೂರದ
ವರೆಗೆ ಕಾಣಿಸುವುದೇ ಇಲ್ಲವೋ ಅಂತಹ ದಿಲ್ಲಿಯಿಂದ
ಅಂತಿಮವಾಗಿ ಏನನ್ನು ಬಯಸಬಹುದು ?

ಗೋವು ಇಂದು ಧರ್ಮನೀತಿ ಮತ್ತು ರಾಜನೀತಿಯ
ನಡುವೆ ಸಿಕ್ಕಿ ನರಳುತ್ತಿದೆ.
ಎಲ್ಲಿಯ ವರೆಗೆ ಗೋವು ಧರ್ಮನೀತಿ ಮತ್ತು
ರಾಜನೀತಿಯ ಬಲೆಯಿಂದ
ಮುಕ್ತವಾಗುವುದಿಲ್ಲವೋ ಅಲ್ಲಿಯ ವರೆಗೆ
ಗೋಹತ್ಯೆಯನ್ನು ನಿಲ್ಲಿಸಲಾಗದು.
ಒಂದು ವೇಳೆ ನಾವು ಗೋವನ್ನು ಧರ್ಮನೀತಿ ಮತ್ತು
ರಾಜನೀತಿಯ ಜಂಜಾಟದಿಂದ ಹೊರತಂದು,
ಅದನ್ನು ಪೂರ್ಣತರಹದಿಂದ ಅರ್ಥ ನೀತಿಯೊಂದಿಗೆ
ಜೋಡಿಸಿದರೆ ಸ್ವತಃ ತಾನೆ ಗೋರಕ್ಷಾ
ಆಂದೋಲನ ಸಫಲವಾಗುತ್ತದೆಂದು ನನ್ನ ಅನಸಿಕೆ.

ಒಂದು ವೇಳೆ ತಾವು ತಂದೆ-ತಾಯಿಗಳಾಗಿದ್ದರೆ ಹಾಗೂ
ತಮ್ಮ ಮಗನ ವಿವಾಹದ ಬಗ್ಗೆ ಯೋಚನೆ
ಮಾಡುತ್ತಿದ್ದರೆ - ನನ್ನದೊಂದು ಸಲಹೆ ಇದೆ.
ನೀವು ನಿಮ್ಮ ಮನೆಗೆ 'ಸೊಸೆ'ಯನ್ನು ತನ್ನಿ,
'ಸೊಸೆರಾಣಿ'ಯನ್ನು ತರಬೇಡಿ.
ಸೊಸೆ ಮನೆಗೆ ಬಂದರೆ ಅವಳು 'ಸಂಸ್ಕಾರ'ದೊಂದಿಗೆ
ಬರುತ್ತಾಳೆ. ಸೊಸೆರಾಣಿ ಮನೆಗೆ ಬಂದರೆ ಅವಳು
'ಕಾರ್' ನೊಂದಿಗೆ ಬರುತ್ತಾಳೆ.
ಯಾರು 'ಕಾರ್'ನೊಂದಿಗೆ ಬರುತ್ತಾರೋ ಅವರು ತಮ್ಮ
'ಸರಕಾರ' ನಡೆಸುವುದು ಶತಸಿದ್ಧ ಹಾಗೂ ಯಾರು
'ಸಂಸ್ಕಾರ'ದೊಂದಿಗೆ ಬರುವವಳು;
ನೀವು ಕರೆದಾಗ ತಕರಾರಿಲ್ಲದೆ ನಿಮ್ಮ ಬಳಿ ಬರುತ್ತಾಳೆ.
ಉತ್ತಮ ಸೊಸೆ ಬಂದರೆ ನಿಮ್ಮ ಮಗನಿಗೆ ನಿತ್ಯವೂ ಒಂದು
ಪಾಠವನ್ನು ಓದಿಸುವಳು. ಆ ಪಾಠ ನಿಮ್ಮ ಜೀವನವನ್ನು
ಸ್ವರ್ಗವಾಗಿಸುತ್ತದೆ. ಅದೇ ಸೊಸೆರಾಣಿ ಬಂದರೆ
ನಿಮ್ಮ ಮಗನಿಗೆ ದಿನಕ್ಕೊಂದು ಬೇಡಿಕೆಯ ಪಟ್ಟಿ ನೀಡಿ
ಓದಿಸುವಳು. ಆ ಪಟ್ಟಿ ನಿಮ್ಮನ್ನು ಬದುಕಿರುವಾಗಲೇ
'ಸ್ವರ್ಗೀಯ'ನನ್ನಾಗಿ ಮಾಡುತ್ತದೆ.

ಇಂದು ನಿಮ್ಮ ಜನ್ಮದಿನವಾಗಿದ್ದರೆ ಒಂದು ಕೆಲಸಮಾಡಿ.
ಎಲ್ಲಕ್ಕಿಂತ ಮೊದಲು ನಿಮಗೆ ಜನ್ಮಕೊಟ್ಟ
'ಅಮ್ಮ'ನಿಗೆ ನಮಸ್ಕರಿಸಿ ನಂತರ ನಿಮಗೆ ಜೀವನಕೊಟ್ಟ
'ಮಹಾತ್ಮ'ನಿಗೆ ನಮಸ್ಕರಿಸಿ, ನಂತರ,
ನಿಮಗೆ ಮುಕ್ತಿ ನೀಡುವ 'ಪರಮಾತ್ಮ'ನಿಗೆ ನಮಸ್ಕರಿಸಿ.
ಜನ್ಮ ದಿನವನ್ನು ಅವಶ್ಯವಾಗಿ ಆಚರಿಸಿ,
ಆದರೆ 'ಅಮ್ಮಾ', 'ಮಹಾತ್ಮಾ' ಮತ್ತು
'ಪರಮಾತ್ಮ'ರನ್ನು ಮರೆತು
'ಅಳಿಸಿ' ಅಲ್ಲ, ಅವರನ್ನು 'ಕರೆಸಿ' ಆಚರಿಸಿ.
ಜನ್ಮದಿನವನ್ನು ಅವಶ್ಯವಾಗಿ ಆಚರಿಸಿ ಆದರೆ
ಈ ಎರಡು ದಿನಗಳ ಜೀವನದಲ್ಲಿ 'ಒಂದು-ದಿನ'
ಸಾವಿನದೂ ಇದೆ ಎನ್ನುವ ಮಾತನ್ನು ಮರೆಯದಿರಿ.

ಸಂತರು ಮತ್ತು ಪೋಲಿಸರು ಇವರಿಬ್ಬರೂ ಸಮಾಜ ಸುಧಾರಣೆ ಕೆಲಸ ಮಾಡುತ್ತಾರೆ.
ಇವರಿಬ್ಬರ ನಡುವಿನ ವ್ಯತ್ಯಾಸವಿಷ್ಟೇ,
ಸಂತರು 'ಸಂಕೇತ'ದ ಭಾಷೆಯಲ್ಲಿ ತಿಳಿಸುತ್ತಾರೆ ಹಾಗೂ
ಪೋಲಿಸರು 'ಬೆತ್ತ'ದ ಭಾಷೆಯಲ್ಲಿ ತಿಳಿಸುತ್ತಾರೆ.
ವಾಸ್ತವಿಕವಾಗಿ ಯಾರು ಸಂತರ ಸಂಕೇತವನ್ನು
ತಿಳಿಯುವುದಿಲ್ಲವೋ ಅವರಿಗೇನೇ ಪೋಲಿಸರ ಬೆತ್ತದ
ಅವಶ್ಯಕತೆ ಬೀಳುತ್ತದೆ.
ಪೋಲಿಸರ ಉಡುಪು ಯಾವುದೇ ಸನ್ಯಾಸಿ ಅಥವಾ
ಭಗವಂತನ ಉಡುಪುಗಳಿಗಿಂತ ಕಡಿಮೆ
ಮಹತ್ವಪೂರ್ಣ ಎಂದು ಭಾವಿಸಬೇಕಾಗಿಲ್ಲ.
ಉಡುಪು ವಿಶ್ವಾಸದ ಪ್ರತೀಕವಾಗಿದೆ. ಉಡುಪು
ಧರಿಸಿದವರು ಒಂದು ವೇಳೆ ಭ್ರಷ್ಟಾಚಾರಕ್ಕೆ ಪ್ರಾಶಸ್ತ್ಯ
ನೀಡಿದರೆ ಅವರು ಉಡುಪಿನ ಅಸ್ಮಿತತೆಯನ್ನು (ಬೆಲೆ)
ಅಪಮೌಲ್ಯಗೊಳಿದಂತಾಗುತ್ತದೆ.

ಒಂದು ವೇಳೆ ತಾವು ಹಿರಿಯರಾಗಿದ್ದರೆ ಮುನಿ
ತರುಣ ಸಾಗರನ ಕೆಲವು ಮಾತುಗಳನ್ನು ಧ್ಯಾನದಲ್ಲಿಡಿ.
ಅವಶ್ಯಕತೆಗಿಂದ ಹೆಚ್ಚು ಹೇಳಬೇಡಿ.
ಕೇಳದ ವಿನಹ ಮಗ- ಸೊಸೆಗೆ ಸಲಹೆ ನೀಡಬೇಡಿ.
60 ವರ್ಷಗಳಾಗಿದ್ದರೆ
ಅಧಿಕಾರದ ಸುಖವನ್ನು ತ್ಯಜಿಸಿರಿ.
ಮಗ-ಸೊಸೆಗೆ 'ಈಗ ನೀವೇ ಈ ಮನೆಯ
ಮಾಲೀಕರಾಗಿದ್ದೀರಿ ನಿಮ್ಮದೇ
ರೀತಿಯಲ್ಲಿ ಜೀವಿಸಿ-ಬದುಕಿ, ನಮ್ಮನ್ನು ಅತಿಥಿಗಳೆಂದು
ಭಾವಿಸಿ' ಎಂದು ಹೇಳಿರಿ. ನಿಃಸಂದೇಹವಾಗಿ !
ತಿಜೋರಿಯ ಬೀಗದ ಕೈಯನ್ನು
ಮಗನಿಗೆ ಕೊಡಿ. ಆದರೆ ಹಾ ! ನಾಳೆ ನಿಮಗಾಗಿ
ಮಗ ಸೊಸೆಯರ ಮುಂದೆ
ಕೈಚಾಚುವಂತಾಗದಷ್ಟನ್ನು ಉಳಿಸಿಕೊಳ್ಳಿರಿ.

ಮಂದಿರ ಮತ್ತು ಮಸೀದಿಗಳ ಸ್ಥಾನ ಮನೆಯ
ಬಾತರೂಮ್‌ಗಿಂತ ಹೆಚ್ಚೇನೂ ಅಲ್ಲ.
ವಾಸ್ತವಿಕವಾಗಿ ಮಂದಿರ ಮತ್ತು ಮಸೀದಿಗಳು ಅಧ್ಯಾತ್ಮಿಕ
ಬಾತ್‌ರೂಮ್‌ಗಳಾಗಿವೆ.
ಹೇಗೆ ಮನೆಯ ಬಾತ್‌ರೂಮನಲ್ಲಿ ನಾವು ಶರೀರದ
ಕೊಳೆಯನ್ನು ತೊಳೆಯುತ್ತೇವೆಯೋ
ಹಾಗೇಯೇ ಮಂದಿರ ಮತ್ತು ಮಸೀದಿಗಳಲ್ಲಿ ಮನಸ್ಸಿನ
ಮಲಿನತೆಗಳನ್ನು ತೊಳೆಯಬೇಕು.
ಬಾತ್‌ರೂಮಿನಿಂದ ನೀವು ಸ್ನಾನ ಮಾಡಿ ಹೊರಬಂದಾಗ
ಅತ್ಯಂತ ತಾಜಾತನದಿಂದ ಹೊರಬರುತ್ತೀರಿ.
ಅಂತಹದೇ ತಾಜಾತನ ವಿನಮ್ರತೆ ಮತ್ತು ಶಾಂತಿ-
ನೀವು ಮಂದಿರ-ಮಸೀದಿಗಳಿಂದ
ಹೊರಬಂದಾಗ ನಿಮ್ಮ ಮುಖದ ಮೇಲೆ ಮಿಂಚಬೇಕು.

ದಾನ ಮತ್ತು ಪುಣ್ಯ ಏಕಾಂತದಲ್ಲಿ ಆಗಬೇಕು. ಹೇಗೆ
ನೀವು ಸ್ನಾನವನ್ನು, ರಸ್ತೆ ಅಥವಾ ನಾಲ್ಕುರಸ್ತೆಗಳು
ಸೇರುವ ಚೌಕದಲ್ಲಿ ಮಾಡದೇ ಮುಚ್ಚಿರುವ ಸ್ನಾನಗೃಹದಲ್ಲಿ
ಮಾಡುತ್ತೀರೋ ಹಾಗೆಯೇ
ದಾನ-ಪುಣ್ಯ ಗುಪ್ತವಾಗಿರಬೇಕು. ಪುಣ್ಯದ ಸುದ್ದಿ ಯಾರಿಗೂ
ತಲುಪದಂತೆ ನೋಡಿಕೊಳ್ಳಬೇಕು. ಯಾಕೆಂದರೆ
ಪುಣ್ಯವನ್ನು ಮುಚ್ಚಿಟ್ಟುಕೊಂಡಷ್ಟು ವೃದ್ಧಿಯಾಗುತ್ತದೆ.
ತೋರಿಸುವುದರಿಂದ ಸಾಯುತ್ತದೆ.
ಪುಣ್ಯ ಬಹಳ ನಾಜೂಕಿನ ಸ್ವಭಾವದ್ದು. ಪುಣ್ಯ ಮತ್ತು
ದಾನವನ್ನು ಪ್ರಕಟಿಸದೇ ಗುಪ್ತವಾಗಿ ಮಾಡಬೇಕು.
ನಿಮ್ಮ ಮನೆಯೊಳಗೆ ಕೊಳೆ-ಗಲೀಜು ಸಂಗ್ರಹವಾಗಿದ್ದರೆ
ಅದನ್ನು ಹೊರ ಹಾಕುವಾಗ
ಅದರ ಬಗ್ಗೆ ಪತ್ರಿಕೆಗಳಲ್ಲಿ ಜಾಹೀರು ಮಾಡುತ್ತೀರಾ ?

'ಮುನಿಶ್ರೀಗಳೇ ನಿಮ್ಮ ಅಡ್ರೆಸ್'-ಎಂದು ಒಬ್ಬ ವ್ಯಕ್ತಿ ಕೇಳಿದ. "ಅರೇ ! ಸಹೋದರಾ, ಯಾರಿಗೆ ಡ್ರೆಸ್ಸೇ ಇಲ್ಲವೋ ಅವರಿಗೆ ಅಡ್ರೆಸ್ಸ್ ಎಲ್ಲಿಬಂತು ?" ಎಂದು ಹೇಳಿದೆ.

ದಿಗಂಬರ ಜೈನ ಮುನಿ 'ವಿದಾ ಉಟ್-ಡ್ರೆಸ್' ಹಾಗೂ "ವಿದಾ ಉಟ್-ಅಡ್ರೆಸ್ಸ್" ಆಗಿರುತ್ತಾರೆ.

ಸಂತರಿಗೆ-ಮುನಿಗಳಿಗೆ ತಮ್ಮದೇ ಆದ ಯಾವುದೇ ಮನೆ ಇರುವುದಿಲ್ಲ.

ಅವರು ಭಕ್ತರ ಮನದಲ್ಲಿ ವಾಸ ಮಾಡುತ್ತಾರೆ.

ಆಶ್ಚರ್ಯಕರ ಸಂಗತಿ ಎಂದರೆ-ಯಾರಿಗೆ ತಮ್ಮದೇ ಆದ 'ವಿಳಾಸ'ವೇ ಇಲ್ಲವೋ, ಅವರೇ ಜನರಿಗೆ ಅವರ ಜೀವನದ ನಿಜವಾದ ಗುರಿಯ 'ವಿಳಾಸ'ವನ್ನು ತೋರಿಸುತ್ತಾರೆ.

ನಾನು ಮಹಾವೀರನನ್ನು ಮಂದಿರಗಳಿಂದ ಮುಕ್ತ ಮಾಡಲು ಇಚ್ಛಿಸುತ್ತೇನೆ. ಈ ಕಾರಣದಿಂದಲೇ ನಾನು ಇತ್ತೀಚಿನ ದಿನಗಳಲ್ಲಿ ನಿಮ್ಮ ಮಂದಿರಗಳಲ್ಲಿ ಪ್ರವಚನ ಮಾಡುವುದನ್ನು ನಿಲ್ಲಿಸಿದ್ದೇನೆ.

ನಾನು ಪಟ್ಟಣದಲ್ಲಿ ವ್ಯಸ್ತವಾಗಿರುವ ನಾಲ್ಕು ರಸ್ತೆಗಳು ಕೂಡಿರುವ ಚೌಕಗಳಲ್ಲಿ ಪ್ರವಚನ ಮಾಡುತ್ತೇನೆ.

ಯಾಕೆಂದರೆ ನಾನು ಭಗವಾನ ಮಹಾವೀರನನ್ನು ಚೌಕದಲ್ಲಿ ನಿಂತಿರುವುದನ್ನು ನೋಡಲು ಇಚ್ಛಿಸುತ್ತೇನೆ.

ಮಹಾವೀರನನ್ನು ಜೈನರಿಂದ ಮುಕ್ತಗೊಳಿಸಿ ಆತನ ಸಂದೇಶಗಳು, ಆತನ ಆಚಾರ, ಆತನ ಆದರ್ಶ ಜೀವನ ಜಗತ್ತಿನ ಮುಂದೆ ಬರಲಿ ಎನ್ನುವುದೇ ನನ್ನ ಏಕಮೇವ ಆಕಾಂಕ್ಷೆಯಾಗಿದೆ.

ಮೃತ್ಯುವಿನ ಎಲ್ಲ ಸಾಮಗ್ರಿಗಳು ಸಿದ್ಧವಾಗಿವೆ. ಚಟ್ಟವೂ ಸಿದ್ಧವಾಗಿದೆ. ಆಯಿತು ! ಪೇಟೆಯಿಂದ ತರುವುದಷ್ಟೇ ತಡ. ಬಟ್ಟೆ ಮತ್ತು ಹಗ್ಗವೂ ಸಿದ್ಧವಾಗಿವೆ. ಕೇವಲ ಆರ್ಡರ್ ಕೊಡುವುದಷ್ಟೇ ತಡ. ಎತ್ತುವವರು ಹಾಗೂ ಸುಡುವವರು ಸಹ ಸಿದ್ಧರಾಗಿದ್ದಾರೆ ಹೇಳುವುದಷ್ಟೇ ತಡ. ಸುಡುವ ಸ್ಥಳವು ಸಿದ್ಧವಾಗಿದೆ. ಅರ್ಥ ಎತ್ತುವುದಷ್ಟೇ ತಡ. ಅಳುವವರು ಸಿದ್ಧರಾಗಿದ್ದಾರೆ. ಹೊರಡಿ ಹೊರಡಿ ಎನ್ನುವ ಸುದ್ದಿ ಕೇಳುವುದಷ್ಟೇ ತಡ. ಮೃತ್ಯುವಿನ ಎಲ್ಲ ಸಾಮಗ್ರಿಗಳು ಸಿದ್ಧವಾಗಿವೆ. ಶ್ವಾಸ ನಿಂತು ಹೋಗುವುದಷ್ಟೇ ತಡ. ಶ್ವಾಸ ನಿಂತ ಕೂಡಲೇ ಅರ್ಧ ಗಂಟೆಯೊಳಗಾಗಿ ಎಲ್ಲ ಸಾಮಗ್ರಿಗಳು ಸೇರಿ ಬಿಡುತ್ತವೆ ಹಾಗೂ ಘಂಟೆಯೊಳಗಾಗಿಯೇ ಅಸ್ತಿಯನ್ನು ಕೊಟ್ಟುಬಿಡುತ್ತಾರೆ. ಆದ್ದರಿಂದ ಅಸ್ತಿಯನ್ನು ಪಡೆಯುವ ಮುನ್ನ ಜೀವನದಲ್ಲಿ ಆಸ್ಥೆಯನ್ನು ಬೆಳೆಸಿಕೊಳ್ಳಬೇಕು ಹಾಗೂ 'ಚಿತೆ' ಉರಿಯುವ ಮೊದಲೇ ನಿಮ್ಮ ಚೇತನವನ್ನು ಎಚ್ಚರಿಸಿಕೊಳ್ಳಿ ಸಾಕು ! ಜೀವನ ಸಾರ್ಥಕವಾಗುತ್ತದೆ.

ಇಡೀ ದೇಶದಲ್ಲಿ ಅತಿ ಹೆಚ್ಚು ಓದಿ ಅಥವಾ ಕೇಳಿ ತಿಳಿದುಕೊಂಡಿರುವ ಕ್ರಾಂತಿಕಾರೀ ಸಂತ

ಮುನಿಶ್ರೀ ತರುಣಸಾಗರ್‌ಜೀ ಅವರ ಓದುವಂತಹ ಸಾಹಿತ್ಯ

ಒಂದು ಪರಿಚಯ

1. **ದುಃಖಿಸೇ ಮುಕ್ತಿ ಕೈಸೇ ಮಿಲೇ**
22 ಮಾನ್ಯತೆ ಪಡೆದ ಪ್ರವಚನಗಳ ಅಪೂರ್ವ ಸಂಕಲನ, ಜೀವನದಲ್ಲಿನ ಸಮಸ್ಯೆಗಳಿಗೆ ಸಮಾಧಾನ ದೊರಕುವಂಥಹ ವಿಚಾರಗಳಿಂದ ಕೂಡಿದ ಪ್ರವಚನ. ಬೆಲೆ : 30 ರೂ.

2. **ಕ್ರೋಧ್ ಕೋ ಕೈಸೇ ಜೀತೇ ?**
(ಹಿಂದೀ, ಇಂಗ್ಲೀಷ್, ಗುಜರಾತಿ ಮತ್ತು ಮರಾಠಿ)
ಜನ-ಜನಗಳ ಸಮಸ್ಯೆ ಕ್ರೋಧವಾಗಿದ್ದು, ಪ್ರತಿಯೊಬ್ಬ ಮನುಷ್ಯನು ಇದರಿಂದ ಚಿಂತೆಗೊಳಗಾಗಿದ್ದಾನೆ ದುಃಖಿತ ನಾಗಿದ್ದಾನೆ. 'ಕ್ರೋಧವನ್ನು ಗೆಲ್ಲು'ವುದರ ಬಗ್ಗೆ ಪುಸ್ತಕದ ವಿಚಾರಪೂರ್ಣ ಸಮರ್ಥವಾಗಿದೆ. ಹೃದಯವನ್ನು ತಟ್ಟುವ ಮುನಿಶ್ರೀಗಳ ವಿಶಿಷ್ಟಶೈಲಿಯ ಕೃತಿ ಚರ್ಚೆಗೊಳಗಾಗಿರುವುದು. ಬೆಲೆ : 15 ರೂ.

3. **ಪ್ರೆಸ್-ವಾರ್ತಾಏ**
ಇಂದೋರ್, ಭೋಪಾಲ್, ಕೋಟಾ, ಮೇರಟ್, ದಿಲ್ಲೀ ಮುಂತಾದ ಕಡೆ ಆಯೋಜಿಸಲಾಗಿದ್ದ ವಿಶಿಷ್ಟ ವಾರ್ತೆಗಳ ಸಂಕಲನದ ಇದೊಂದು ಅಪೂರ್ವ ಪ್ರಕಾಶನ-ಪುಸ್ತಕವಾಗಿದೆ. ಬೆಲೆ : 25ರೂ.

4. **ಚಪಲ್-ಮನ್**
ಮನಸ್ಸು ಮತ್ತು ಬುದ್ಧಿಯನ್ನು ಅಲ್ಲೋಲ-ಕಲ್ಲೋಲ ಮಾಡುವಂತ ಕವಿತೆಗಳನ್ನು ಓದಲು ಕುಳಿತರೆ ಓದುತ್ತಲೇ ಇರಬೇಕೆನಿಸುವ ಮುಶ್ರೀಗಳ ಮೊದಲ ಹಾಗೂ ಬಹಳ ಚರ್ಚೆಗೊಳಗಾದ ಪುಸ್ತಕ. ಬೆಲೆ : 25 ರೂ.

5. **ಜೈನ ಬಾಲಭಾರತಿ (ಭಾಗ 1,2,3,4)**
ಜೈನಧರ್ಮದ ಪ್ರಾರಂಭಿಕ ಜ್ಞಾನವು ಸರ್ವಶ್ರೇಷ್ಠ ಬಾಲ ಪ್ರಕಾಶನವಾಗಿದೆ. ಹೊಸ ಶೈಲಿಯಲ್ಲಿ ಜೈನಧರ್ಮದ ಕಠಿಣ ವಿಚಾರಗಳ ಸುಂದರತೆಯು ಹೇಳಲ್ಪಟ್ಟಿದೆ. ಬೆಲೆ : 20 ರೂ.

6. **ಮನಕೋ ಕೈಸೇ ಜೀಏ ?**
ಮನಸ್ಸು ಚಂಚಲ ಹಾಗೂ ಚಪಲದ್ದಾಗಿದೆ, ಏತಕ್ಕೆ ? ಈ ಚಂಚಲ ಮನಸ್ಸನ್ನು ಹೇಗೆ ನಿಯಂತ್ರಿಸುವುದು ? ಈ ಪ್ರಶ್ನೆಗೆ ತಕ್ಷಣದ ಉತ್ತರ ಈ ಕೃತಿಯಲ್ಲಿದೆ. ಬೆಲೆ : 15 ರೂ.

7. **ಮೃತ್ಯು-ಬೋಧ(ಬಹುಚರ್ಚಿತ್)**(ಹಿಂದೀ ಅಥವಾ ಇಂಗ್ಲಿಷ್)
ಜೀವನದ ಶಾಶ್ವತ ಸತ್ಯ 'ಮೃತ್ಯು'ವಿನ ಮೇಲೆ ಒಂದು ಮೂಲ್ಯ ಕೃತಿಯಲ್ಲಿ ಒಂದೊಂದು ಶಬ್ದವೂ ಎಷ್ಟು ಸರಸ, ಸಿಹಿ, ಪವಿತ್ರ, ಜೀವಂತ ಹಾಗೂ ನೂತನವಾಗಿದೆ, ಎಂದರೆ ಮನಸ್ಸು ಇದರ ಒಂದೊಂದು ವಾಕ್ಯಗಳ ಬಗ್ಗೆ ಯೋಚನೆ ಮಾಡುವಂತೆ ಮಾಡುತ್ತದೆ. ಬೆಲೆ : 15 ರೂ.

8. **ಮುಕುಟ್-ಜಬ್ ಜುಕುನೇ ಲಗೇ**
23 ಆಗಸ್ಟ್, 1997ರಂದು ದಿಲ್ಲಿಯ ರಾಮಲೀಲಾ ಮೈದಾನ ದಲ್ಲಿ ಭಾರತ ಸರ್ಕಾರದ ಗೃಹಮಂತ್ರಿ ಶ್ರೀ ಲಾಲಕೃಷ್ಣ ಆದ್ವಾನಿ ಅವರ ಮುಖ್ಯ ಆತಿಥ್ಯದಲ್ಲಿ ಯಾವುದು ನೀವು ಓದುತ್ತೀರೋ, ಕುಲಕರ್ ನಾಭೀ ರಾಜರ ಜೀವನದ ಒಂದು ಪ್ರಸಂಗ : ನಿಮ್ಮ ಜೀವನಕ್ಕಾಗಿ. ಬೆಲೆ : 15 ರೂ.

9. **ಏಕ್ ಲಡ್‌ಕೀ** (ಹಿಂದೀ ಅಥವಾ ಇಂಗ್ಲೀಷ್)
ಮುನಿಶ್ರೀ ಇವರಿಂದ ಜುಲೈ 5, 1997ರ ದಿಲ್ಲಿಯ ಐತಿಹಾಸಿಕ ಪರೇಡ್ ಮೈದಾನ, ಲಾಲ್‌ಕಿಲಾ ಮೈದಾನದಲ್ಲಿ ಭ್ರೂಣ ಹತ್ಯ ವಿಚಾರವಾಗಿ ಒಂದು ವಿಶೇಷ ಪ್ರವಚನ. ಇದನ್ನು ಓದುತ್ತಾ ನಗುತ್ತಿರಬೇಕು-ಅಳುತ್ತಿರಬೇಕು. ಬೆಲೆ : 15 ರೂ.

10. **ಏಕ್ ಥಾ ಸೇಠ್**
ಪ್ರಥತ್ ಒಂದು ಕಥಾ-ಪ್ರವಚನ. ಜೀವನದ ನೈಜತೆ ಮತ್ತು ಆಧ್ಯಾತ್ಮದ ಗಹನವಾದ ಅಪೂರ್ವ ಚಿಂತನ. ಬೆಲೆ:15 ರೂ

11. **ಕ್ರಾಂತಿಕಾರಿ ಸಂತ**
ಪ್ರಸಿದ್ಧ ಲೇಖಕರಾದ ಸುರೇಶ್‌ರವರು 'ಸುಲಭ'ವಾದ ಶೈಲಿಯಲ್ಲಿ ಮುನಿಶ್ರೀ ತರುಣಸಾಗರ್‌ಜೀ ಅವರ ಅನುಪಮ ಹಾಗೂ ಪ್ರೇರಣಾ ಜೀವನ ಗಾಥಾ. ಬೆಲೆ : 100 ರೂ.

12. **ಮಹಾವೀರೋದಯ** (ಹಿಂದೀ ಅಥವಾ ಇಂಗ್ಲೀಷ್)
ಮಹಾವೀರ ಸ್ವಾಮಿಯವರ 2600ನೇ ವರ್ಷದ ಜನ್ಮ ಜಯಂತಿ ಸಂದರ್ಭದಲ್ಲಿ ಭಗವಾನ್ ಮಹಾವೀರರ ಜೀವನ ಮತ್ತು ದರ್ಶನದ ಕುರಿತು ಸ್ಪಷ್ಟ ಸೂತ್ರಗಳ ಅಪೂರ್ವ ಸಂಗ್ರಹ. ಬೆಲೆ : 20 ರೂ.

13. **ಮೈ ಸೀಖಾನೇ ನಹೀಂ, ಜಗಾನೇ ಆಯಾ ಹೂಂ**
ಶ್ರೀ ಮುಕೇಶ ನಾಯಕ್ (ಉಚ್ಚ ಶಿಕ್ಷಾ ಮಂತ್ರಿ, ಮಧ್ಯ ಪ್ರದೇಶ್ ಶಾಸನ್) ಇವರಿಂದ ಸಂಪಾದಿಸಲ್ಪಟ್ಟಿದೆ. ಮುನಿಶ್ರೀ ರವರ ಭೋಪಾಲ್ ಪ್ರವಾಸ ಜನವರಿ, 1994ರಲ್ಲಿ 33 ಜೀವನೋಪಯೋಗಿ ಚಿಂತನ ಪೂರ್ಣ ವಿಷಯಗಳ ಬಗ್ಗೆ ನಡೆದ ಪ್ರವಚನದ ಸುಂದರ ರಚನೆ. ಬೆಲೆ : 30 ರೂ.

14. **ರಾಷ್ಟ್ರ ಕೇ ನಾಮ್ ಸಂದೇಶ್**
ನವಂಬರ್ 30, 1997ನ್ನು ಮಾಂಸ-ರಫ್ತು ಹಾಗೂ ಕಸಾಯಿಖಾನೆಗಳ ವಿರೋಧಿ ಆಚರಣೆಯಾಗಿ ಇಡೀ ದೇಶದಲ್ಲಿ ಅಹಿಂಸಾ ಸಮ್ಮೇಳನದಲ್ಲಿ ಒಂದು ಲಕ್ಷ ಸಭಿಕರ ಸಮ್ಮುಖದಲ್ಲಿ ದಿಲ್ಲಿಯ ಐತಿಹಾಸಿಕ ಲಾಲ್ ಕಿಲಾದಲ್ಲಿ ಮುನಿಶ್ರೀ ಅವರಿಂದ ದೇಶದ ಹೆಸರಿನಲ್ಲಿ ಸಂದೇಶ. ಧರ್ಮ, ಸಮಾಜ ಹಾಗೂ ರಾಷ್ಟ್ರದ ಮೇಲೆ ಒಂದು ಜ್ಯೋತಿರ್ಮಯ ಚಿಂತನ ಪ್ರವಚನ. ಬೆಲೆ : 15 ರೂ.

15. **ತರುಣಸಾಗರ್-ಉವಾಚ**
ಇಂದೋರ್ ಮತ್ತು ಮೇರಟ್‌ನ ವಿಭಿನ್ನ ಸ್ಥಾನಗಳಲ್ಲಿ ಮುನಿಶ್ರೀ ಅವರಿಂದ ಕೊಡಲ್ಪಟ್ಟ ಅಮೃತ ಪ್ರವಚನಗಳ ಸಾರ-ಸಂಕ್ಷೇಪ. ಬೆಲೆ : 25 ರೂ.

16. **ಮುರ್ಖೋ ಆಸ್‌ಸೇ ಕುಛ್ ಕಹನಾ ಹೈ**
(ಹಿಂದೀ ಅಥವಾ ಇಂಗ್ಲೀಷ್) ಇಂದೋರಿನಲ್ಲಿ ಜನವರಿ 26, 1995ರಂದು ರಾಜವಾಡದಲ್ಲಿ ಐತಿಹಾಸಿಕ ಧರ್ಮಸಭೆಯಲ್ಲಿ ಮುನಿಶ್ರೀ ಅವರಿಂದ ಕೊಡಲ್ಪಟ್ಟ ಒಂದು ಕ್ರಾಂತಿಕಾರೀ ಪ್ರವಚನ. ಯಾರು ಬದುಕುವ ಕಲೆಯನ್ನು ಕಲಿಸುತ್ತಾರೋ? ಬೆಲೆ : 15ರೂ.

17. **ಪಬ್ಲಿಕ್ ಪ್ರವಚನ್**
ಜನ ಸಾಧಾರಣರ ಮಧ್ಯದಲ್ಲಿ ಕೊಡಲ್ಪಟ್ಟಿರುವ ಒಂದು ಅಮೃತ ಪ್ರಧಾನವಾದ ತಿಳುವಳಿಕೆ ಬರುವಂತ ಜೀವನವನ್ನು ಸ್ವರ್ಗ ಹೇಗೆ ಮಾಡಿಕೊಳ್ಳುವುದು, ಶರೀರದಿಂದ ಮೃತ್ಯು ಹೇಗೆ ಆಗುತ್ತನೆ. ಬೆಲೆ : 25 ರೂ.

18. **ಮೈನೆ ಸುನಾ ಹೈ**
ಪೂಜ್ಯ ಶ್ರೀಗಳಿಂದ ಭಾರತದ ಪ್ರಸಿದ್ಧ ದಿಗಂಬರ ಜೈನ ತೀರ್ಥ ತಿಜಾರದ ಚಾರ್ತುಮಾಸ-2000ದಲ್ಲಿ ಪ್ರತ್ಯೇಕ ರವಿವಾರ ದಂಯ ನಡೆದವಿಶೇಷ ಪ್ರವಚನಗಳ ಸಂಗ್ರಹ. ಬೆಲೆ : 30 ರೂ.



ಕ್ರಾಂತಿಕಾರೀ ಸಂತ

ಮುನಿಶ್ರೀ ತರುಣಸಾಗರರು

ಮುನಿಶ್ರೀ ತರುಣಸಾಗರರ ಉಪದೇಶ ಬಹುಶಃ ಧಾರ್ಮಿಕ, ಆಧ್ಯಾತ್ಮಿಕ ಹಾಗೂ ರಾಷ್ಟ್ರೀಯ ಚಿಂತನೆಯ ಜೊತೆಗೆ ಮಸ್ತಿ ಮತ್ತು ತಮಾಶೆಯ ವರ್ಣದಲ್ಲಿ ಮುಳುಗಿದಂತೆ ಇವೆ. ಆದರೆ ಅವು ಎಷ್ಟೊಂದು ತೀಕ್ಷ್ಣ, ತೂಕ ಮತ್ತು ಆಳವಾಗಿರುತ್ತವೆ ಎಂದರೆ ಗಲಿಬಿಲಿಯ ಹೊರ್ತಾಗಿಯೂ ಮನಸ್ಸು ಮತ್ತು ಬುದ್ಧಿಯನ್ನು ಅಲುಗಾಡಿಸಿ ಬಿಡುತ್ತವೆ ಹಾಗೂ ಪ್ರತಿಯೊಬ್ಬರೂ ಯೋಚಿಸುವಂತೆ ಮಾಡುತ್ತವೆ.

ಮುನಿಶ್ರೀಗಳ ಚಿಂತನೆ ಹಾಗೂ ಪ್ರವಚನಗಳಲ್ಲಿ ಮನುಷ್ಯನ ಪ್ರತಿನಿತ್ಯದ ಜೀವನವನ್ನು ಸುಖಮಯವನ್ನಾಗಿ ಮಾಡುವ ಹೇಳಿಕೆಗಳಿವೆ. ಕ್ರಾಂತಿಕಾರೀ ಸಂತನ ಅಮೃತವಾಣಿಯಲ್ಲಿ ಒಂದು ಕಡೆ ಮನುಷ್ಯನ ಜೀವನವನ್ನು ಸುಂದರಮಯ ಹಾಗೂ ಸುಖಮಯ ಮಾಡುವ ಆತ್ಮೀಯ ಪ್ರೇರಣೆಯೂ ಆಗಿದೆ.

ಮುನಿಶ್ರೇಷ್ಠ ಶ್ರೀ ತರುಣಸಾಗರರ ವಿಶೇಷತೆ ಎಂದರೆ, ಹಾಸ್ಯ-ಪರಿಹಾಸ್ಯದ ರೇಷ್ಮೆ ಬಟ್ಟೆಯಲ್ಲಿ ಸುತ್ತಿ ನೀಡುವ ಹೊಡೆತ-ಕೇಳುವವನನ್ನು ನಗಿಸುತ್ತದೆ. ಜೊತೆಯಲ್ಲಿ ಆತ ನಾಚಿ ನೀರಾಗಿ ಬಿಡುತ್ತಾನೆ.

ಪ್ರಸುತ್ತ ಕೃತಿ 'ಕಡವೇ ಪ್ರವಚನ''-'ಕಹಿ ಮಾತ್ರೆ'ಯ ಒಂದೊಂದು ಶಬ್ದ ಅನುಭವದ ಒಲೆಯ ಮೇಲೆ ಬೆಂದಿದೆ. ಆದ್ದರಿಂದ ಈ ಪ್ರವಚನದ ಮಾತುಗಳನ್ನು ಸ್ವರ್ಣಸೂತ್ರಗಳು ಎನ್ನದೇ ಅಮೃತ ಸೂತ್ರಗಳೆಂದು ಕರೆಯುವುದು ಸತ್ಯಕ್ಕೆ ಹೆಚ್ಚು ಸಮೀಪವಾಗಿದೆ.

ಮುನಿಶ್ರೀ ತರುಣಸಾಗರರು ರಾಷ್ಟ್ರೀಯ, ಸಾಮಾಜಿಕ ಮತ್ತು ವ್ಯಕ್ತಿಗತ ಕೆಡಕುಗಳ ಮೇಲೆ ಎಷ್ಟೊಂದು ಸ್ಪಷ್ಟ ಹಾಗೂ ತೀಷ್ಣವಾದ ಪೆಟ್ಟು ನೀಡುತ್ತಾರೋ ಬಹುಶಃ ಯಾವುದೇ ಸಂತ-ಮುನಿಗಳು ಮಾಡುವುದಕ್ಕಿಂತ ಹೆಚ್ಚೆಂದು ಹೇಳಬಹುದು.

''ಕಹಿ ಮಾತನಾಡುವುದು ನನ್ನ ಪ್ರಕೃತಿಯಲ್ಲ ಅನಿವಾರ್ಯತೆ. ನಾನು ಸಿಹಿ ಮಾತನಾಡಿದರೆ ಜನರಿಗೆ ಅವರನ್ನು ಮಲಗಿಸಲು ಜೋಗಳ ಹಾಡುತ್ತಿದ್ದೇನೆಂದು ಅನಿಸುತ್ತದೆ. ಸಂತರು, ಸಚಿವರು ಮತ್ತು ವೈದ್ಯರು ಕಹಿಯನ್ನೇ ಮಾತನಾಡಬೇಕಾಗುತ್ತದೆ'' ಎಂದು ಅವರು ಹೇಳುತ್ತಾರೆ.